ಬಂದಷ್ಟೇ ವೇಗವಾಗಿ ಹಿಂತಿರುಗಿದಳು. ಅವಳು ಹೋಗುವಾಗ ಹಾಕಿಕೊಂಡಿದ್ದ ಸೆಂಟ್‌ನ ಪರಿಮಳವನ್ನು ಬಿಟ್ಟುಹೋಗಿದ್ದಳು.

"ಎಂತಹ ಹೆಂಗಸು, ಪ್ರಾಣಿ!" ನಾನು ಉದ್ಗರಿಸಿದೆ.

"ಹೌದು ಹೇಸ್ಟಿಂಗ್, ಆಕೆ ಬಹಳ ಬುದ್ಧಿವಂತೆ. ಸರದಾರರ ಪತ್ನಿಯರು ಯಾವತ್ತೂ ಪ್ರಾಣಿಗಳೇ. ಹೇಸ್ಟಿಂಗ್, ಇದು ನನ್ನ ತಮಾಷೆ ಅಷ್ಟೇ. ಅವಳು ನಿಜವಾಗಿಯೂ ರಷ್ಯನ್ನಳೇ... ಆದ್ದರಿಂದಲೇ ಬರ್ನಾರ್ಡ್ ಅವಳ ಬಳಿ ನಿವೇದಿಸಿಕೊಂಡಿದ್ದಾನೆ."

"ಈ ಸಿಗರೇಟ್ ಪೆಟ್ಟಿಗೆ ಅವನದ್ದು. ನನಗೆ ಆಶ್ಚರ್ಯವಾಗಿತ್ತು. ಈ ಕೈಗವಸು ಕೂಡ ಅವನದ್ದೇ" ಮುಗುಳ್ನಗುತ್ತಾ ಪೈರೆಟ್ ತನ್ನ ಜೇಬಿನಿಂದ ಮತ್ತೊಂದು ಅಂತಹುದೇ ಕೈಗವಸು ತೆಗೆದು ಮೊದಲಿನ ಕೈಗವಸಿನ ಬಳಿ ಇಟ್ಟ. ಅವೆರಡು ಜೋಡಿ ಅನ್ನುವುದರಲ್ಲಿ ಸಂಶಯವೇ ಇರಲಿಲ್ಲ.

"ಪೈರೆಟ್, ಇನ್ನೊಂದನ್ನು ನೀನು ಎಲ್ಲಿಂದ ಸಂಪಾದಿಸಿದೆ?"

"ಅದನ್ನು ಬರಿಸ್ಟ್ರೀಟ್‌ನ ಹಜಾರದ ಮೇಜಿನ ಬಳಿಯಿದ್ದ ಕೋಲಿನ ಹತ್ತಿರ ಬಿಸಾಡಲಾಗಿತ್ತು. ನಿಜವಾಗಿಯೂ ಅಜಾಗರೂಕತೆಯ ತರುಣ, ಆ ಪಾರ್ಕರ್. ಇರಲಿ, ನಾವು ಗಮನಿಸುತ್ತಿರಬೇಕು. ಕೆಲವು ವಸ್ತುಗಳಿಗಾಗಿ ನಾವು ಪಾರ್ಕ್‌ಲೇನ್‌ಗೆ ಹೋಗಬೇಕಿದೆ."

ಅಗತ್ಯವಿಲ್ಲದಿದ್ದರೂ ನಾನು ಗೆಳೆಯನಿಗೆ ಜೊತೆಯಾದೆ. ಅಲ್ಲಿಗೆ ಹೋಗುವಾಗ ಜಾನ್‌ಸ್ಟನ್ ಹೊರಗೆ ಹೋಗಿದ್ದ. ಆದರೆ ನಾವು ಅವನ ಆಪ್ತಕಾರ್ಯದರ್ಶಿಯನ್ನು ನೋಡಿದೆವು. ಜಾನ್‌ಸ್ಟನ್ ಇತ್ತೀಚೆಗಷ್ಟೇ ದಕ್ಷಿಣ ಆಫ್ರಿಕಾದಿಂದ ಬಂದಿರುವ ವಿಷಯ ತಿಳಿಯಿತು. ಅವನು ಇದಕ್ಕಿಂತ ಮೊದಲು ಎಂದೂ ಇಂಗ್ಲೆಂಡ್‌ನಲ್ಲಿರಲಿಲ್ಲ.

"ಅವನಿಗೆ ಬೆಲೆಬಾಳುವ ಹರಳುಗಳಲ್ಲಿ ಆಸಕ್ತಿಯಿಲ್ಲವೇ?" ಪೈರೆಟ್ ಜಾನ್‌ಸ್ಟನ್‌ನ ಕಾರ್ಯದರ್ಶಿಗೆ ಅಪಾಯಕ್ಕೆ ಸಿಲುಕಿಸುವಂತಹ ಪ್ರಶ್ನೆಯನ್ನು ಕೇಳಿದ.

"ಗುರುತಿನ ಪಕ್ಕದಲ್ಲಿಯೇ ಚಿನ್ನದಗಣಿ ಇದೆ" ಎಂದ ಕಾರ್ಯದರ್ಶಿ ನಕ್ಕ.

ಪೈರೆಟ್ ಸಂದರ್ಶನ ಮುಗಿಸಿ ಬಂದ ಮೇಲೆ ಸಾಯಂಕಾಲದ ಹೊತ್ತಿಗೆ ನನಗೆ ಆಶ್ಚರ್ಯವಾಗುವ ರೀತಿಯಲ್ಲಿ ರಷ್ಯನ್ ವ್ಯಾಕರಣವನ್ನು ಅಭ್ಯಸಿಸುತ್ತಿದ್ದ.

"ಒಳ್ಳೆಯದು ಪೈರೆಟ್, ನೀನು ರಷ್ಯನ್ ಭಾಷೆಯನ್ನು ಕಲಿಯುತ್ತಿದ್ದೀಯಾ. ಅದೂ ಕೌಂಟಸ್‌ಳ ಜೊತೆಗೆ ಮಾತನಾಡಲು?"

"ಹೌದು, ಅವಳು ಯಾವತ್ತೂ ನನ್ನ ಇಂಗ್ಲಿಷನ್ನು ಕೇಳಿಸಿಕೊಳ್ಳುವುದಿಲ್ಲ, ಅದಕ್ಕೆ."

"ಆದರೆ ರಷ್ಯನ್ನರು ಫ್ರೆಂಚ್ ಭಾಷೆಯನ್ನು ಬಹಳ ವಿಭಿನ್ನವಾಗಿ ಮಾತಾಡ್ತಾರೆ."

"ಹೇಸ್ಟಿಂಗ್, ನೀನು ನನ್ನ ಮಾಹಿತಿಯನ್ನೇ ಹೇಳುತ್ತಿರುವೆ. ರಷ್ಯನ್ನರ ಅಕ್ಷರಗಳು ಬಹಳ ತೊಡಕಿನವುಗಳು. ನಾನು ಅವನ್ನು ಕಲಿಯಬೇಕು" ಅವನು ತನ್ನ ಬಳಿಯಿದ್ದ ವ್ಯಾಕರಣ ಪುಸ್ತಕವನ್ನು ನಾಟಕೀಯ ಸಂಜ್ಞೆಯಲ್ಲಿ ಎಸೆದ. ನನಗೆ ಸಮಾಧಾನವಾಯಿತು. ಆದರೆ ಅವನ ಕಣ್ಣುಗಳ ಹೊಳಪು ಮಾತ್ರ ಮಾಸಿರಲಿಲ್ಲ.

"ನೀನು ಆಕೆ ರಷ್ಯನ್ನಳೇ ಅಲ್ಲವೇ ಎಂದು ಪರೀಕ್ಷಿಸಬೇಕೆಂದಿರುವೆಯಾ?"

"ಹಾಂ! ಇಲ್ಲ... ಇಲ್ಲಪ್ಪ. ಅವಳು ರಷ್ಯನ್ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ."

"ಮತ್ತೆ."

"ಹೇಸ್ಟಿಂಗ್, ನೀನು ವಾಸ್ತವಕ್ಕಿಂತ ತುಸು ಭಿನ್ನವಾಗಿ ಆಲೋಚಿಸಿದರೆ ನಿನಗೆ ಅರ್ಥವಾಗುತ್ತದೆ. ಬೆಲೆಯಿಲ್ಲದ ಸಹಾಯವೇ ರಷ್ಯಾದಲ್ಲಿ ಮೊದಲ ಹೆಜ್ಜೆ."

ಅವನು ಮುಗುಳ್ನಕ್ಕು ಮತ್ತೇನನ್ನೂ ಹೇಳಲಿಲ್ಲ. ಅವನು ಆ ತರುಣ ಆಕೆಗೆ ಸಹಾಯ ಮಾಡಿದ್ದಕ್ಕೆ